**1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ  ನಂಃ **95/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಉಮೇಶ್ | ಪಿಡಬ್ಲೂ - 02 |
| ತಂದೆಯ ಹೆಸರು | - ಹುಲಿಯಪ್ಪ | ಸಿಡಬ್ಲೂ - 09 |
| ವಯಸ್ಸು | - 59 ವರ್ಷ | |
| ಉದ್ಯೋಗ | - ಹಾಲಿನ ವ್ಯಾಪಾರ | |
| ವಾಸ ಸ್ಥಳ | - ಹರಿಯಪ್ಪನ ಬೀದಿ, ಚಿಕ್ಕಮಗಳೂರು | |

ದಿನಾಂಕಃ 03.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(*ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ಮುಖ್ಯ ವಿಚಾರಣೆ :  ಸರ್ಕಾರಿ ಅಭಿಯೋಜಕರಿಂದ-

1. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು. ಮೃತ ಕನಕ ಗೊತ್ತು. ಫ್ರಾಸಾ.1 ಗೊತ್ತು. ಚಾಸಾ.10 ಗೊತ್ತು, ಅವರು ಚಿಕ್ಕಮಗಳೂರು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿರುವ ರಮೇಶರವರ ಬೇಕರಿಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ.

2. ನಾನು ಈಗ್ಗೆ 12 ವರ್ಷಗಳಿಂದ ಹಾಲಿನ ವ್ಯಾಪಾರವನ್ನು ಮಾಡಿಕೊಂಡಿದ್ದೇನೆ. ಅಂದರೆ ಚಿಕ್ಕಮಗಳೂರಿನ ಬಸ್ ನಿಲ್ದಾಣದಲ್ಲಿರುವ ಹೋಟೆಲ್, ಅಂಗಡಿ ಮತ್ತು ಬೇರೆ ಬೇರೆ ರಸ್ತೆಗಳಲ್ಲಿರುವ ಅಂಗಡಿ ಮತ್ತು ಹೋಟೆಲುಗಳಿಗೆ ಅಂದರೆ ಸುಮಾರು 50 ಅಂಗಡಿ ಮತ್ತು ಹೋಟೆಲುಗಳಿಗೆ ನಾನು ನಂದಿನಿ ಹಾಲಿನ ಪ್ಯಾಕೇಟುಗಳನ್ನು ಸರಬರಾಜು ಮಾಡುತ್ತೇನೆ. ಸಾಮಾನ್ಯವಾಗಿ ಬೆಳಗಿನ ಜಾವ 2.30 ಗಂಟೆಯಿಂದ 3 ಗಂಟೆ ಸುಮಾರಿಗೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹತ್ತಿರ ಇರುವ ನಂದಿನಿ ಹಾಲಿನ ಪ್ಯಾಕೇಟುಗಳು ಬರುತ್ತವೆ, ನಾನು ಅದೇ ಸಮಯಕ್ಕೆ ಅವುಗಳನ್ನು ಪಡೆದುಕೊಂಡು ಅವುಗಳನ್ನು ಮೇಲೆ ಹೇಳಿದಂತೆ ಅಂಗಡಿ ಹೋಟೆಲುಗಳಿಗೆ ಕೊಟ್ಟು ಬರುವ ಕೆಲಸವನ್ನು ಪ್ರಾರಂಭಿಸುತ್ತೇನೆ. ರಾತ್ರಿ 11.30 ಗಂಟೆಯವರೆಗೆ ನನಗೆ ಕೆಲಸ ಇರುತ್ತದೆ.

3. ಈಗ್ಗೆ 3 ರಿಂದ 4 ವರ್ಷಗಳಿಂದ ಕನಕ ಎಂಬ ಅಜ್ಜಿ ಐ.ಜಿ. ರಸ್ತೆಯ ಬದಿಯಲ್ಲಿ ಬಿಕ್ಷೆ ಬೇಡಿಕೊಂಡು ಇರುವುದನ್ನು ನಾನು ನೋಡಿದ್ದೆನು. ಆಗ ಆಕೆ ನನಗೆ ಪರಿಚಯವಾಗಿದ್ದು, ನಾನು ಆಕೆಯನ್ನು ಮಾತನಾಡಿಸಿದಾಗ ಕಾಫಿ, ಟೀ ಇದ್ದರೆ ಕೊಡಿಸು ಎಂದು ನನ್ನನ್ನು ಕೇಳಿ ಪಡೆದುಕೊಳ್ಳುತ್ತಿದ್ದರು. ಐ.ಜಿ ರಸ್ತೆಯಲ್ಲಿರುವ ನಂದಿನಿ ಬೂತ್ ನಿಂದ ಸ್ವಲ್ಪ ದೂರದಲ್ಲಿರುವ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತ್ ನಲ್ಲಿ ಸದರಿ ಕನಕ ಮಲಗಿಕೊಳ್ಳುತ್ತಿದ್ದರು. ಆಕೆ ತನಗೆ ಒಬ್ಬ ಮಗ ಇರುವುದಾಗಿ ಹೇಳುತ್ತಿದ್ದರು. ಆಕೆ ತನ್ನ ಬಳಿ ಇದ್ದ ಒಂದು ಬ್ಯಾಗಿನಲ್ಲಿ ತನ್ನ ಮಗನ ಮೊಬೈಲ್ ನಂಬರನ್ನು ಒಂದು ಚೀಟಿಯಲ್ಲಿ ಬರೆದುಕೊಂಡಿದ್ದು, ಅದನ್ನು ಆಕೆ ನನಗೆ ತೋರಿಸಿ ನನ್ನ ಮಗನಿಗೆ ಫೋನ್ ಮಾಡು ಎಂದು ಹೇಳುತ್ತಿದ್ದರು. ಅದರಂತೆ ನಾನು

ಒಂದರಿಂದ 2 ಬಾರಿ ನನ್ನ ಮೊಬೈಲಿನಿಂದ ಆಕೆಯ ಮಗನಿಗೆ ಫೋನ್ ಮಾಡಿ ಮಾತನಾಡಲು ಕೊಟ್ಟಿದ್ದೆನು.

4. ಈಗ್ಗೆ ಒಂದೂವರೆ ವರ್ಷದ ಹಿಂದೆ ಒಂದು ದಿನ ರಾತ್ರಿ 11.30 ಗಂಟೆಯಲ್ಲಿ ನಾನು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಿಂದ ನನ್ನ ಮನೆಗೆ ಹೋಗುತ್ತಿದ್ದೆನು. ಆಗ ಮೇಲೆ ಹೇಳಿದ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತ್ ನಲ್ಲಿ ಕನಕರವರು ಮಲಗಿಕೊಂಡಿದ್ದು, ಆರೋಪಿ ಆಕೆಯ ಬಳಿ ಇದ್ದು ಆಕೆಯನ್ನು ಕುರಿತು ತನ್ನ ಕಾಲನ್ನು ಒತ್ತುವಂತೆ ಹೇಳುತ್ತಿದ್ದನು. ಆಗ ಕನಕರವರು ಹೋಗೋ ನಾನು ಯಾಕೆ ನಿನ್ನ ಕಾಲನ್ನು ಒತ್ತಲಿ ಎಂದು ಬೈಯುತ್ತಿದ್ದರು. ಆಗ ನಾನು ಆರೋಪಿಯನ್ನು ಕುರಿತು, ನಿನಗೆ ಯಾಕೆ ಬೇಕು, ಯಾಕೆ ಅಜ್ಜಿಯ ಹತ್ತಿರ ಗಲಾಟೆ ಮಾಡುತ್ತೀಯಾ, ಅಲ್ಲಿಂದ ಹೋಗು ಎಂದು ಬೈದು ಕಳುಹಿಸಿ ನಾನು ನನ್ನ ಮನೆಗೆ ಹೋದೆನು.

5. ನಂತರ ನಾನು ಬೆಳಗಿನ ಜಾವ 2.30 ಗಂಟೆ ಸುಮಾರಿಗೆ ಡೈರಿ ಹಾಲು ಬಂದಿದ್ದರಿಂದ ನಾನು ಹಾಲಿನ ಪ್ಯಾಕೇಟುಗಳನ್ನು ಇಳಿಸಿಕೊಳ್ಳಲು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಹೋಗಲೆಂದು ನನ್ನ ಸ್ಕೂಟಿಯಲ್ಲಿ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಹೋಗುತ್ತಿದ್ದಾಗ ಅಲ್ಲಿಗೆ ಮೇಲೆ ಹೇಳಿದಂತೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ರಮೇಶ ಎಂಬುವವರ ಬೇಕರಿಯಲ್ಲಿ ಕೆಲಸ ಮಾಡುವ ಚಾಸಾ.10 ರವಿರವರು ಸಹ ಐ.ಜಿ. ರಸ್ತೆಯಲ್ಲಿ ನಡೆದುಕೊಂಡು ನನ್ನ ಎದುರಿಗೆ ಬಂದರು. ಸದರಿ ರವಿರವರು ನನ್ನಿಂದ ಹಾಲಿನ ಪ್ಯಾಕೇಟುಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದರು. ನಾವಿಬ್ಬರು ಅಲ್ಲಿ ನಿಂತಿದ್ದಾಗ ಆರೋಪಿ ಒಂದು ಸೈಜ್ ಕಲ್ಲನ್ನು ಕೈಯಲ್ಲಿ ಎತ್ತಿ ಹಿಡಿದುಕೊಂಡಿದ್ದನು. ಫುಟಪಾತಿನ ಮೇಲೆ ಮಲಗಿದ್ದ

ಕನಕರವರನ್ನು ಕುರಿತು, ನನ ಕಾಲನ್ನು ಒತ್ತುವುದಿಲ್ಲವಾ, ಬೇವರ್ಸಿ ಮುಂಡೆ ಎಂದು ಬೈದು ಸದರಿ ಸೈಜ್ ಕಲ್ಲನ್ನು ಆಕೆಯ ತಲೆಯ ಮೇಲೆ ಹಾಕಿದನು. ಆಗ ಕನಕರವರ ತಲೆಗೆ ಗಾಯವಾಗಿ ರಕ್ತಬಂತು. ಆಗ ನಾನು ಮತ್ತು ಚಾಸಾ.10 ರವಿರವರು ಆರೋಪಿಯನ್ನು ತಡೆಯಲು ಹೋದೆವು. ಆಗ ಆರೋಪಿ ನಮ್ಮನ್ನು ಕುರಿತು, ಸೂಳೆಮಕ್ಕಳಾ, ಹತ್ತಿರ ಬಂದರೆ ನಿಮ್ಮ ಮೇಲು ಕಲ್ಲನ್ನು ಎತ್ತಿ ಹಾಕುತ್ತೇನೆ ಎಂದು ಹೆದರಿಸಿದನು. ನಾನು ಮತ್ತು ಚಾಸಾ.10 ರವರು ಆರೋಪಿಯನ್ನು ಗದರಿಸಿ ಆತನನ್ನು ಹಿಡಿದುಕೊಂಡೆವು. ಆಗ ಆರೋಪಿ ತನ್ನ ಕೈಯಲ್ಲಿದ್ದ ಕಲ್ಲನ್ನು ಕೆಳಗೆ ಬೀಳಿಸಿದನು. ನಂತರ ಚಾಸಾ.10 ರವರು ಆಂಬ್ಯುಲೇನ್ಸಿಗೆ ಫೋನ್ ಮಾಡಿ ಕರೆಸಿದರು. ಆಂಬ್ಯುಲೇನ್ಸಿನಲ್ಲಿ ಕನಕರವರನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನಾನು ಮತ್ತು ಚಾಸಾ.10 ರವರು ನನ್ನ ಸ್ಕೂಟಿಯಲ್ಲಿ ಸದರಿ ಆಸ್ಪತ್ರೆಗೆ ಹೋದೆವು. ಅಲ್ಲಿ ವೈದ್ಯರು ಕನಕರವರನ್ನು ಪರೀಕ್ಷಿಸಿ ಆಕೆ ಮೃತಪಟ್ಟಿರುವುದಾಗಿ ತಿಳಿಸಿ ಶವವನ್ನು ಸದರಿ ಆಸ್ಪತ್ರೆಯ ಶವಗಾರದಲ್ಲಿ ಇರಿಸಿದರು.

6. ನಂತರ ನಾನು ಮೃತ ಕನಕರವರ ಮಗನಾದ ಫ್ರಾಸಾ.1 ರವರಿಗೆ ಫೋನ್ ಮಾಡಿ ನಡೆದ ವಿಚಾರವನ್ನು ತಿಳಿಸಿದೆನು. ನಂತರ ನಾನು ನನ್ನ ಕೆಲಸಕ್ಕೆ ಹೋದೆನು. ಫ್ರಾಸಾ.1 ರವರು ಸದರಿ ಆಸ್ಪತ್ರೆಗೆ ಹೋಗಿದ್ದರು, ಆದರೆ ಅವರು ನನಗೆ ಸಿಗಲಿಲ್ಲ. ನಂತರ ಫ್ರಾಸಾ.1 ರವರು ಆರೋಪಿಯ ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸರಿಗೆ ದೂರನ್ನು ಕೊಟ್ಟ ವಿಚಾರ ತಿಳಿಯಿತು. ನಂತರ ಪೊಲೀಸರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟೆನು.

7. ಆದಾದ ಒಂದುವರೆ ತಿಂಗಳುಗಳ ಬಳಿಕ ಪೊಲೀಸರು ನನ್ನನ್ನು ಚಿಕ್ಕಮಗಳೂರಿನ ನ್ಯಾಯಾಧೀಶರ ಬಳಿ ಹಾಜರು ಪಡಿಸಿದ್ದರು. ಆಗ ನಾನು ಅವರಿಗೂ ಸಹ ನಡೆದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

8. ಆರೋಪಿ ಕನಕರವರ ತಲೆಯ ಮೇಲೆ ಎತ್ತಿ ಹಾಕಿದ್ದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಸೈಜ್ ಕಲ್ಲನ್ನು ನೋಡಿ ಆರೋಪಿಯು ಕನಕರವರ ತಲೆಯ ಮೇಲೆ ಎತ್ತಿ ಹಾಕಿದ ಕಲ್ಲು ಅದೇ ಎಂದು ನುಡಿದಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಸೈಜ್ ಕಲ್ಲನ್ನು ಮು.ಮಾ.6 ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 6 ಎಂದು ಗುರುತಿಸಲ್ಪಟ್ಟ ಕಲ್ಲನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

9. ಸಾಕ್ಷಿಯು ಈಗಾಗಲೇ ನಿಪಿ.3 ಮತ್ತು ಪಿ.4 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳಲ್ಲಿ ಮೃತ ಕನಕರವರ ಶವ ಮತ್ತು ಆಕೆಯ ತಲೆಗೆ ಆದ ಗಾಯಗಳು ಕಂಡುಬರುವುದಾಗಿ ನುಡಿದಿರುತ್ತಾರೆ. ಸಾಕ್ಷಿ ಈಗಾಗಲೇ ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋದಲ್ಲಿ ನಾನು ಮೇಲೆ ಹೇಳಿದಂತೆ ಆರೋಪಿ ಕೃತ್ಯವೆಸಗಿದ್ದ ಸ್ಥಳ ಕಂಡುಬರುವುದಾಗಿ ನುಡಿದಿರುತ್ತಾರೆ.

10. ಕನಕರವರು ಮೃತಪಡುವ ಸಮಯದಲ್ಲಿ ಅವರ ಮೈಮೇಲಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯು ಸದರಿ ಬಟ್ಟೆಗಳ

ಬಣ್ಣಗಳನ್ನು ಹೇಳದ ಹೊರತು ಸಾಕ್ಷಿಗೆ ಅವುಗಳನ್ನು ತೋರಿಸಲು ಬರುವುದಿಲ್ಲ ಎಂದು ತಕರಾರು ತೆಗೆದಿರುತ್ತಾರೆ. ವಸ್ತು ಅಥವಾ ಬಟ್ಟೆಗಳನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿ ಅವುಗಳನ್ನು ಗುರುತಿಸಿದರೆ ಮಾತ್ರ ಅವುಗಳನ್ನು ಮುದ್ದೆಮಾಲುಗಳನ್ನಾಗಿ ಗುರುತಿಸಲಾಗುತ್ತದೆ, ಒಂದು ವೇಳೆ ಸಾಕ್ಷಿ ಅವುಗಳನ್ನು ಗುರುತಿಸಲು ವಿಫಲರಾದರೆ ಮಾತ್ರ ಅವುಗಳನ್ನು ಮುದ್ದೆಮಾಲುಗಳಾಗಿ ಗುರುತಿಸಲು ಬರುವುದಿಲ್ಲ, ಹಾಗಾಗಿ ಆರೋಪಿ ಪರ ವಕೀಲರು ತೆಗೆದ ತಕರಾರಿನಲ್ಲಿ ಯಾವುದೇ ತಿರುಳಿಲ್ಲವೆಂದು ಪರಿಗಣಿಸಿ ಅದನ್ನು ತೆಗೆದು ಹಾಕಲಾಯಿತು). ಸಾಕ್ಷಿಯು ಈಗಾಗಲೇ ಮು.ಮಾ.4 ಮತ್ತು 5 ಎಂದು ಗುರುತಿಸಲ್ಪಟ್ಟಿರುವ ಚೂಡಿದಾರ ಟಾಪ್ ಮತ್ತು ಸೀರೆಯನ್ನು ನೋಡಿ ಕನಕರವರು ಮೃತಪಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

11. ನೀವು ಫೋನ್ ಮಾಡಿ ಫ್ರಾಸಾ.1 ರವರಿಗೆ ವಿಷಯವನ್ನು ತಿಳಿಸಿದ ಬಳಿಕ ಅದೇ ದಿನ ಅಂದರೆ ದಿಃ 10-05-2024 ರಂದು ಬೆಳಿಗ್ಗೆ 6 ಗಂಟೆಗೆ ಅವರು ಮತ್ತು ಅವರ ಕಡೆಯವರು ಚಿಕ್ಕಮಗಳೂರಿಗೆ

ಬಂದಾಗ ನೀವು ಅವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿದ್ದೀರಿ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರವಾಗಿಃ LADCS ನ Deputy Chief Defense counsel ಆದ ಶ್ರೀ ಎನ್.ಡಿ ವಕೀಲರಿಂದಃ</u>**

12. ಚಿಕ್ಕಮಗಳೂರು ನನ್ನ ಸ್ವಂತ ಊರು. ನಾನು 8 ನೇ ತರಗತಿಯವರೆಗೆ ಓದಿದ್ದೇನೆ. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಎದುರಿಗೆ ನಂದಿನಿ ಹಾಲಿನ ಪಾರ್ಲರ್ ಇದೆ. ಸದರಿ ಪಾರ್ಲರಿನಿಂದ ಸುಪ್ರೀಮ್ ಮೆಡಿಕಲ್ಸ್ ಗೆ ಸುಮಾರು 80 ರಿಂದ 100 ಅಡಿ ದೂರವಾಗಬಹುದು. ನೆಹರು ರಸ್ತೆಯಲ್ಲಿ ನನಗೆ ಸೇರಿದ ನಂದಿನಿ ಹಾಲಿನ ಪಾರ್ಲರ್ ಇದೆ, ಅಲ್ಲಿಗೆ ಹಾಲಿನ ಲಾರಿ ಬರಲು ಹಿರಿದಾದ ರಸ್ತೆ ಇಲ್ಲ, ಹಾಗಾಗಿ ನಾನು ಬಸ್ ನಿಲ್ದಾಣದ ಎದುರಿಗೆ ಇರುವ ನಂದಿನಿ ಹಾಲಿನ ಪಾರ್ಲರ್ ಬಳಿ ಬಂದು ಅಲ್ಲಿಂದ ಹಾಲಿನ ಪ್ಯಾಕೇಟುಗಳನ್ನು ತೆಗೆದುಕೊಂಡು ಹೋಗುತ್ತೇನೆ. ನನ್ನ ಬಳಿ ಯಾವುದೇ ಕೆಲಸಗಾರರು ಇಲ್ಲ. ನಂದಿನಿ ಹಾಲನ್ನು ವಿತರಿಸಲು ನಾನು ಕೆ.ಎಂ.ಎಫ್. ರವರಿಂದ ಪರವಾನಿಗೆಯನ್ನು ಪಡೆದುಕೊಂಡಿದ್ದೇನೆ. ಅದನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ನನ್ನ ಬಳಿ ಇದೆ , ಬೇಕಿದ್ದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನೀವು ನೆಹರು ರಸ್ತೆಯಲ್ಲಿರುವ ಅಂಗಡಿಯನ್ನು ಹೊರತುಪಡಿಸಿ ಬೇರೆ ಎಲ್ಲೂ ಹಾಲಿನ ವ್ಯಾಪಾರವನ್ನು ಮಾಡುವುದಿಲ್ಲ ಎಂದರೆ ಸಾಕ್ಷಿ ಅಲ್ಲಿ ಮಾಡುತ್ತೇನೆ ಮತ್ತು ನಾನು ಹೇಳಿದಂತೆ ಸುಮಾರು 50 ಹೋಟೆಲ್ ಮತ್ತು ಅಂಗಡಿಗಳಿಗೆ ಹಾಲಿನ ಪ್ಯಾಕೇಟುಗಳನ್ನು ಸರಬರಾಜು ಮಾಡುತ್ತೇನೆ ಎನ್ನುತ್ತಾರೆ. ಆ ರೀತಿ ನೀವು ಹಾಲನ್ನು ಸರಬರಾಜು ಮಾಡುವುದು ಬೆಳಗಿನ ಸಮಯದಲ್ಲಿ ಎಂದರೆ ಸರಿ.

13. ನಾನು ಚಿಕ್ಕಮಗಳೂರು ಹರಿಯಪ್ಪನ ಬೀದಿಯಲ್ಲಿ ವಾಸವಾಗಿದ್ದೇನೆ. ಅಲ್ಲಿಂದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಎದುರಿಗೆ ಇರುವ ನಂದಿನಿ ಹಾಲಿನ ಪಾರ್ಲರಿಗೆ ಸುಮಾರು ಸಾವಿರ ಮೀಟರ್ ನಷ್ಟು ದೂರವಾಗಬಹುದು. ನಂದಿನಿ ಹಾಲಿನ ಲಾರಿ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಎದುರಿಗೆ ಇರುವ ನಂದಿನಿ ಹಾಲಿನ ಪಾರ್ಲರ್ ಗೆ ಬೆಳಗಿನ ಜಾವ 2 ಗಂಟೆ ಸುಮಾರಿಗೆ ಬರುತ್ತದೆ, 2.30 ಗಂಟೆಯಿಂದ ನಾನು ಹಾಲಿನ ಪ್ಯಾಕೇಟುಗಳನ್ನು ಇಳಿಸಿಕೊಂಡು ಹೋಟೆಲುಗಳಿಗೆ ಮತ್ತು ಅಂಗಡಿಗಳಿಗೆ ಸರಬರಾಜು ಮಾಡಲು ಶುರು ಮಾಡುತ್ತೇನೆ. ಆ ಸಮಯದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ  ಹೊರಗೆ ಮತ್ತು ಒಳಗೆ ಜನರು ಇರುತ್ತಾರೆ ಎಂದರೆ ಸಾಕ್ಷಿ ಬಸ್ ನಿಲ್ದಾಣದ ಹೊರಗೆ ಇರುವುದಿಲ್ಲ, ಆದರೆ ಒಳಗೆ ಬಸ್ಸಿಗಾಗಿ ಕಾಯುವವರು ಇರುತ್ತಾರೆ ಎನ್ನುತ್ತಾರೆ. ಪ್ರವಾಸಿ ಸ್ಥಳವಾಗಿರುವುದರಿಂದ ರಾತ್ರಿಯಿಡಿ ವಾಹನಗಳ ಓಡಾಟ ಇರುತ್ತವೆ ಎಂದರೆ ಸರಿ.

14. ಚಿಕ್ಕಮಗಳೂರು ಐ.ಜಿ. ರಸ್ತೆಯ ಮಧ್ಯದಲ್ಲಿ ಸಿಮೆಂಟ್ ವಿಭಜಕ ಇದೆ ಎಂದರೆ ಸರಿ. ಸದರಿ ವಿಭಜಕ ಇರುವ ಕಾರಣ ನೀವು ನಂದಿನಿ ಪಾರ್ಲರ್ ಬಳಿ ನಿಂತು ನೋಡಿದರೆ ಸುಪ್ರೀಮ್ ಮೆಡಿಕಲ್ಸ್ ಬಳಿ ಏನು ನಡೆಯುತ್ತದೆ ಎಂದು ಕಾಣಿಸುವುದಿಲ್ಲ ಎಂದರೆ ಸದರಿ ವಿಭಜಕ ಕೇವಲ 3 ಅಡಿ ಎತ್ತರ ಇದೆ, ಹಾಗಾಗಿ ನೀಟಾಗಿ ಕಾಣುತ್ತದೆ ಎನ್ನುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಕತ್ತಲೆ ಇದ್ದ ಕಾರಣ ನಿಮಗೆ ಅಲ್ಲಿ ಏನು ನಡೆಯಿತು ಎಂದು ಕಂಡಿಲ್ಲ ಎಂದರೆ ಸಾಕ್ಷಿ ಪಕ್ಕದಲ್ಲೇ ಲೈಟ್ ಕಂಬ ಇತ್ತು, ಅದರ ಬೆಳಕಿನಲ್ಲಿ ಕಾಣಿಸಿತು ಎನ್ನುತ್ತಾರೆ.

15. ಕೃತ್ಯ ನಡೆಯಿತು ಹೇಳಲಾದ ಸಮಯದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಎದುರಿಗೆ ಇರುವ ಪಾರ್ಲರ್ ಬಳಿ ನೀವು ಇದ್ದೀರಿ ಎಂದರೆ ಸಾಕ್ಷಿ ಸದರಿ ಪಾರ್ಲರಿನಿಂದ ಸುಮಾರು 10 ಅಡಿ ದೂರದಲ್ಲಿ ಹಾಲಿನ ಲಾರಿಯನ್ನು ನಿಲ್ಲಿಸಲಾಗಿತ್ತು, ಘಟನಾ ಸಮಯದಲ್ಲಿ ನಾನು ಸದರಿ ಲಾರಿಯ ಬಳಿ ಇದ್ದೆನು, ಸದರಿ ಸ್ಥಳದ ಎದುರಿಗೆ ಸುಪ್ರೀಮ್ ಮೆಡಿಕಲ್ಸ್ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಲಾರಿ ನಿಂತಿದ್ದ ಸ್ಥಳ ಮತ್ತು ಸುಪ್ರೀಮ್ ಮೆಡಿಕಲ್ಸ್ ಮಧ್ಯದಲ್ಲಿ ಮೇಲೆ ಹೇಳಿದ 3 ಅಡಿ ಎತ್ತರದ ವಿಭಜಕ ಇದೆ, ನಾನು ಮತ್ತು ಚಾಸಾ.10 ರವರು ಅದನ್ನು ಹಾರಿ ಸ್ಥಳಕ್ಕೆ ಹೋದೆವು ಎನ್ನುತ್ತಾರೆ.

16. ಆರೋಪಿ ಕಲ್ಲನ್ನು ಕನಕರವರ ಮೇಲೆ ಎತ್ತಿ ಹಾಕಿದ್ದನ್ನು ನೀವು ಖುದ್ದಾಗಿ ನೋಡಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಮು.ಮಾ.6 ಎಂದು ಗುರುತಿಸಲ್ಪಟ್ಟ ಕಲ್ಲನ್ನು ಮೇಲಿನಿಂದ ಎತ್ತಿ ತಲೆಯ ಮೇಲೆ ಹಾಕಿದರೆ ತಲೆ ಪೂರ್ತಿ ಜಜ್ಜಿ ಹೋಗುತ್ತದೆ ಎಂದರೆ ಸಾಕ್ಷಿ ತಲೆಯ ಹಿಂಭಾಗಕ್ಕೆ ಕಲ್ಲು ಬಿದ್ದು ಗಾಯವಾಗಿ ಪೂರ್ತಿ ರಕ್ತವಾಗಿತ್ತು ಎನ್ನುತ್ತಾರೆ. ನಿಪಿ.3 ಮತ್ತು ಪಿ.4 ಫೋಟೋಗಳಲ್ಲಿ ಕನಕರವರಿಗೆ ಗಾಯವಾಗಿರುವುದು ಕಂಡುಬರುವುದಿಲ್ಲ ಎಂದರೆ ಸರಿಯಲ್ಲ.

17. ನೀವು ಮತ್ತು ಚಾಸಾ.10 ರವರು ಸ್ಥಳಕ್ಕೆ ಹೋಗುವಷ್ಟರಲ್ಲಿ ಸುಮಾರು ಜನರು ಅಲ್ಲಿ ಸೇರಿದ್ದರು ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ಆರೋಪಿ ತುಂಬಾ ಕೋಪದಿಂದ ಇದ್ದನು ಎಂದರೆ ಸರಿ. ಆ ಸಮಯದಲ್ಲಿ ತಾನು ಏನು ಮಾಡುತ್ತಿದ್ದೇನೆ ಎಂದು ಆರೋಪಿಗೆ ಅರಿವೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಕಲ್ಲನ್ನು ಬಿಸಾಡಿದಾಗ ನಾನು ಅಲ್ಲಿ ಬಿದ್ದಿದ್ದ ಬಾಳೆ ದಿಂಡನ್ನು ತೆಗೆದುಕೊಂಡು ಆತನಿಗೆ ಹೊಡೆದಾಗ ಆತ

ತಪ್ಪಾಯಿತು ತಪ್ಪಾಯಿತು ಎಂದು ಹೇಳಿದನು, ನೀವು ಅದು ಹೇಗೆ ಆತನಿಗೆ ಅರಿವು ಇರಲಿಲ್ಲ ಎನ್ನುತ್ತೀರಿ ಎನ್ನುತ್ತಾರೆ. ಆ ರೀತಿ ನೀವು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

18. ಆರೋಪಿ ಗೊತ್ತು ಎಂದು ಹೇಳಿದ್ದೀರಿ, ಹೇಗೆ ಮತ್ತು ಎಷ್ಟು ದಿನಗಳಿಂದ ಆತ ನಿಮಗೆ ಗೊತ್ತು ಎಂದರೆ ಸಾಕ್ಷಿ ಆರೋಪಿ ಸಹ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿಯೇ ಇರುತ್ತಿದ್ದನು, ಅಲ್ಲಿಗೆ ಬಂದವರನ್ನು ಕುರಿತು ಟೀ, ಕಾಫಿ, ಊಟ ಕೊಡಿಸಿ ಎಂದು ಕೇಳುತ್ತಿದ್ದನು, ಅದೇ ರೀತಿ ನನ್ನನ್ನು ಕೇಳುತ್ತಿದ್ದನು, ಹಾಗಾಗಿ ಆತ ಗೊತ್ತು ಎನ್ನುತ್ತಾರೆ. ಆರೋಪಿ ಎಲ್ಲರ ಬಳಿ ತಾನು ವಕೀಲನೆಂದು ಹೇಳಿಕೊಂಡು ಏನೋ ಸಮಸ್ಯೆಯಾಗಿ ಎಲ್ಲವನ್ನು ಕಳೆದುಕೊಂಡಿದ್ದಾಗಿ ಹೇಳುತ್ತಿದ್ದನು.

19. ಆರೋಪಿ ಮಾನಸಿಕವಾಗಿ ಬಳಲುತ್ತಿದ್ದ ವಿಚಾರ ನಿಮಗೆ ಗೊತ್ತೇ ಎಂದರೆ ಸಾಕ್ಷಿ ಹಿಂದೆ ಒಂದು ಬಾರಿ ಮಾನಸಿಕ ಸಮಸ್ಯೆ ಆಗಿತ್ತು ಎಂದು ಗೊತ್ತು ಎನ್ನುತ್ತಾರೆ. ಆರೋಪಿ ಕೆಲವೊಮ್ಮೆ ಚೆನ್ನಾಗಿರುತ್ತಿದ್ದನು ಮತ್ತೊಮ್ಮೆ ಮಾತನಾಡುತ್ತಲೇ ಜೋರಾಗಿ ರೇಗುತ್ತಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತ ಚೆನ್ನಾಗಿಯೇ ಇದ್ದನು ಎನ್ನುತ್ತಾರೆ.

20. ಘಟನೆಯಾಗಿ ಈಗ್ಗೆ ಒಂದರಿಂದ ಒಂದೂವರೆ ವರ್ಷಗಳು ಕಳೆದಿರುವ ಕಾರಣ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟ ದಿನಾಂಕ ನೆನಪಿಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಫ್ರಾಸಾ.1 ರವರಿಗೆ ಫೋನ್ ಮಾಡಿದ ಬಳಿಕ ನೀವು ನಿಮ್ಮ ಕೆಲಸಕ್ಕೆ ಹೋಗಿದ್ದಾಗಿ ಹೇಳಿದ್ದೀರಿ ನಂತರ ಅಭಿಯೋಜಕರವರು ಮಾಡಿದ ಪಾಟೀ ಸವಾಲಿನಲ್ಲಿ ಫ್ರಾಸಾ.1 ರವರು ಚಿಕ್ಕಮಗಳೂರಿಗೆ ಬಂದ ಬಳಿಕ ನೀವು ಅವರನ್ನು ಮತ್ತು ಅವರ ಕಡೆಯವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು

ಹೋಗಿ ತೋರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ ಫ್ರಾಸಾ.1 ರವರಿಗೆ ಫೋನ್ ಮಾಡಿದ ಬಳಿಕ ಅವರು ಮತ್ತು ಅವರ ಮನೆಯ ಕಡೆಯವರು ಬೆಳಿಗ್ಗೆ ಸುಮಾರು 6 ಗಂಟೆಗೆ ಚಿಕ್ಕಮಗಳೂರಿಗೆ ಬಂದರು, ನಂತರ ನಾನು ಅವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿ ಪುನಃ ಅವರನ್ನು ಆಸ್ಪತ್ರೆಗೆ ಬಿಟ್ಟು ನಾನು ನನ್ನ ಕೆಲಸಕ್ಕೆ ಹೋದೆನು ಎನ್ನುತ್ತಾರೆ. ನಾನು ಫ್ರಾಸಾ.1 ರವರಿಗೆ ಫೋನ್ ಮಾಡಿದಾಗ ಬೆಳಗಿನ ಜಾವ ಸುಮಾರು 3 ರಿಂದ 3.30 ಗಂಟೆಯಾಗಿತ್ತು. ನನಗೆ ಫ್ರಾಸಾ.1 ರವರ ಪರಿಚಯ ಇರಲಿಲ್ಲ. ಫ್ರಾಸಾ.1 ರವರ ಫೋನ್ ನಂಬರ್ ನಿಮ್ಮ ಬಳಿ ಇರಲಿಲ್ಲ ಮತ್ತು ನೀವು ಅವರಿಗೆ ಫೋನ್ ಮಾಡಿ ಅವರಿಗೆ ವಿಷಯ ತಿಳಿಸಿಲ್ಲ ಎಂದರೆ ಸಾಕ್ಷಿ ಕನಕರವರು ಬಿಕ್ಷೆಯಿಂದ ಬರುತ್ತಿದ್ದ ಹಣವನ್ನು ಯಾರಾದರೂ ಕದಿಯುತ್ತಾರೆ ಎಂದು ಸುತ್ತಮುತ್ತಲಿನ ಬೇಕರಿಯವರ ಬಳಿ ಇರಿಸುತ್ತಿದ್ದರು ಮತ್ತು ತನ್ನ ಮಗನ ಫೋನ್ ನಂಬರನ್ನು ನನಗೆ ಮತ್ತು ಎಲ್ಲರಿಗೂ ಕೊಟ್ಟಿದ್ದರು ಎನ್ನುತ್ತಾರೆ.

21. ಕನಕರವರನ್ನು ಹೊರತುಪಡಿಸಿ ಇನ್ನೂ ಹಲವು ಬಿಕ್ಷುಕರು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಮತ್ತು ಅಕ್ಕಪಕ್ಕ ರಸ್ತೆಗಳಲ್ಲಿ ಇರುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಹಲವರು ಇದ್ದಾರೆ, ಅವರ ಪೈಕಿ ಸುಮಾರು ಜನರು ಬಿಕ್ಷೆ ಬೇಡಿ ಕುಡಿಯುತ್ತಿದ್ದರು, ಇರುವುದರಲ್ಲಿ ಕನಕರವರು ಸ್ವಲ್ಪ ಪರವಾಗಿರಲಿಲ್ಲ ಎನ್ನುತ್ತಾರೆ. ಬಿಕ್ಷೆ ಬೇಡುವವರು ಇಂತಿಂತಹ ಜಾಗ ನಮಗೆ ಸೇರಿದ್ದು ಎಂದು ತಮ್ಮ ತಮ್ಮಲ್ಲಿ ಕಿತ್ತಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಕನಕರವರು ಮದ್ಯವನ್ನು ಸೇವಿಸಿ ಬಿದ್ದು ಗಾಯ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

22. ರಾತ್ರಿ 11.30 ಗಂಟೆ ಸಮಯದಲ್ಲಿ ಆರೋಪಿ ಕನಕರರಿಗೆ ಕಾಲು ಒತ್ತು ಎಂದು ಹೇಳಿ ಅವರೊಂದಿಗೆ ಗಲಾಟೆ ಮಾಡುತ್ತಿದ್ದನ್ನು ನೋಡಿದಾಗ ಹೇಳಿದ್ದೀರಿ ಆ ಸಮಯದಲ್ಲಿ ನೀವು ಪೊಲೀಸರಿಗೆ ಫೋನ್ ಮಾಡಿ ಅದನ್ನು ತಿಳಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ನಾನು ಆರೋಪಿಗೆ ಯಾಕೆ ಗಲಾಟೆ ಮಾಡುತ್ತೀಯಾ ಎಂದು ಬೈದು ಗದರಿಸಿ ಅಲ್ಲಿಂದ ಕಳುಹಿಸಿ ನಾನು ಹೋಗಿದ್ದೆನು, ಹಾಗಾಗಿ ನಾನು ಯಾಕೆ ಫೋನ್ ಮಾಡಬೇಕಾಗಿತ್ತು ಎನ್ನುತ್ತಾರೆ. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಪೊಲೀಸರನ್ನು ನಿಯೋಜಿಸಲಾಗಿರುತ್ತದೆ ಎಂದರೆ ಸಾಕ್ಷಿ ಬೀಟ್ ಗೆ ಹೋಗುವ ಪೊಲೀಸರು ಬಂದು ಹೋಗುತ್ತಾರೆ ಅಷ್ಟೆ ಎನ್ನುತ್ತಾರೆ.

23. ಪೊಲೀಸರು ಸ್ಥಳಕ್ಕೆ ಯಾವಾಗ ಬಂದರು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಆಂಬ್ಯುಲೇನ್ಸಿಗೆ ಕನಕರವರನ್ನು ಮಲಗಿಸುತ್ತಿದ್ದಾಗ ಪೊಲೀಸರು ಜೀಪಿನಲ್ಲಿ ಅಲ್ಲಿಗೆ ಬಂದರು ಎನ್ನುತ್ತಾರೆ. ಆರೋಪಿಯನ್ನು ಪೊಲೀಸರಿಗೆ ಯಾರು ಹಾಜರು ಪಡಿಸಿದರು ಎಂದರೆ ಸಾಕ್ಷಿ ನಾನು, ಚಾಸಾ.10 ರವಿ ಮತ್ತು ನಂತರದಲ್ಲಿ ಅಲ್ಲಿಗೆ ಬಂದಿದ್ದ ಸಾರ್ವಜನಿಕರು ಸೇರಿ ಆರೋಪಿಯನ್ನು ಹಿಡಿದು ಇಟ್ಟುಕೊಂಡಿದ್ದೆವು, ಪೊಲೀಸರು ಬಂದಾಗ ನಾವು ಆರೋಪಿಯನ್ನು ಅವರ ವಶಕ್ಕೆ ಕೊಟ್ಟೆವು ಎನ್ನುತ್ತಾರೆ. ಆ ಸಮಯದಲ್ಲೂ ಸಹ ಆರೋಪಿ ತುಂಬಾ ಕೋಪದಿಂದ ವರ್ತಿಸುತ್ತಿದ್ದನು, ಆತನನ್ನು ಹಿಡಿಯಲು 5 ರಿಂದ 6 ಜನ ಬೇಕಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಸೈಲೇಂಟ್ ಆಗಿಯೇ ಇದ್ದನು ಎನ್ನುತ್ತಾರೆ. ಆ ಸಮಯದಲ್ಲಿ ಆರೋಪಿ ಕೋಪ ಮತ್ತು ಉಗ್ರ ರೂಪದಿಂದ ಇದ್ದನು ಎಂದರೆ ಸರಿಯಲ್ಲ.

24. ಮು.ಮಾ.4 ಮತ್ತು 5 ಬಟ್ಟೆಗಳನ್ನು ನೀವು ಆ ದಿನ ಮೃತಳ ಮೈಮೇಲೆ ನೋಡಿಲ್ಲ ಎಂದರೆ ಸರಿಯಲ್ಲ. ಈಗ್ಗೆ ಒಂದೂವರೆ ವರ್ಷದ ಹಿಂದೆ ಒಂದು ದಿನ ರಾತ್ರಿ 11.30 ಗಂಟೆಯಲ್ಲಿ ನಾನು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಿಂದ ನನ್ನ ಮನೆಗೆ ಹೋಗುತ್ತಿದ್ದೆನು, ಆಗ ಮೇಲೆ ಹೇಳಿದ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಇರುವ ಫುಟಪಾತ್ ನಲ್ಲಿ ಕನಕರವರು ಮಲಗಿಕೊಂಡಿದ್ದು, ಆರೋಪಿ ಆಕೆಯ ಬಳಿ ಇದ್ದು ಆಕೆಯನ್ನು ಕುರಿತು ತನ್ನ ಕಾಲನ್ನು ಒತ್ತುವಂತೆ ಹೇಳುತ್ತಿದ್ದನು, ಆಗ ಕನಕರವರು ಹೋಗೋ ನಾನು ಯಾಕೆ ನಿನ್ನ ಕಾಲನ್ನು ಒತ್ತಲಿ ಎಂದು ಬೈಯುತ್ತಿದ್ದರು, ಆಗ ನಾನು ಆರೋಪಿಯನ್ನು ಕುರಿತು, ನಿನಗೆ ಯಾಕೆ ಬೇಕು, ಯಾಕೆ ಅಜ್ಜಿಯ ಹತ್ತಿರ ಗಲಾಟೆ ಮಾಡುತ್ತೀಯಾ, ಅಲ್ಲಿಂದ ಹೋಗು ಎಂದು ಬೈದು ನನ್ನ ಮನೆಗೆ ಹೋದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ನಾನು ಬೆಳಗಿನ ಜಾವ 2.30 ಗಂಟೆ ಸುಮಾರಿಗೆ ಡೈರಿ ಹಾಲು ಬಂದಿದ್ದರಿಂದ ನಾನು ಹಾಲಿನ ಪ್ಯಾಕೇಟುಗಳನ್ನು ಇಳಿಸಿಕೊಳ್ಳಲು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಹೋಗಲೆಂದು ನನ್ನ ಸ್ಕೂಟಿಯಲ್ಲಿ ಸುಪ್ರೀಮ್ ಮೆಡಿಕಲ್ಸ್ ಹತ್ತಿರ ಹೋಗುತ್ತಿದ್ದಾಗ ಅಲ್ಲಿಗೆ ಮೇಲೆ ಹೇಳಿದಂತೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ರಮೇಶ ಎಂಬುವವರ ಬೇಕರಿಯಲ್ಲಿ ಕೆಲಸ ಮಾಡುವ ಚಾಸಾ.10 ರವಿರವರು ಸಹ ಐ.ಜಿ. ರಸ್ತೆಯಲ್ಲಿ ನಡೆದುಕೊಂಡು ನನ್ನ ಎದುರಿಗೆ ಬಂದರು, ಸದರಿ ರವಿರವರು ನನ್ನಿಂದ ಹಾಲಿನ ಪ್ಯಾಕೇಟುಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದರು. ನಾವಿಬ್ಬರು ಅಲ್ಲಿ ನಿಂತಿದ್ದಾಗ ಆರೋಪಿ ಒಂದು ಸೈಜ್ ಕಲ್ಲನ್ನು ಕೈಯಲ್ಲಿ ಎತ್ತಿ ಹಿಡಿದುಕೊಂಡಿದ್ದನು, ಫುಟಪಾತಿನ ಮೇಲೆ ಮಲಗಿದ್ದ ಕನಕರವರನ್ನು ಕುರಿತು, ನನ ಕಾಲನ್ನು ಒತ್ತುವುದಿಲ್ಲವಾ,

ಬೇವರ್ಸಿ ಮುಂಡೆ ಎಂದು ಬೈದು ಸದರಿ ಸೈಜ್ ಕಲ್ಲನ್ನು ಆಕೆಯ ತಲೆಯ ಮೇಲೆ ಹಾಕಿದನು, ಆಗ ಕನಕರವರ ತಲೆಗೆ ಗಾಯವಾಗಿ ರಕ್ತಬಂತು, ಆಗ ನಾನು ಮತ್ತು ಚಾಸಾ.10 ರವಿರವರು ಆರೋಪಿಯನ್ನು ತಡೆಯಲು ಹೋದೆವು, ಆಗ ಆರೋಪಿ ನಮ್ಮನ್ನು ಕುರಿತು, ಸೂಳೆಮಕ್ಕಳಾ, ಹತ್ತಿರ ಬಂದರೆ ನಿಮ್ಮ ಮೇಲು ಕಲ್ಲನ್ನು ಎತ್ತಿ ಹಾಕುತ್ತೇನೆ ಎಂದು ಹೆದರಿಸಿದನು, ನಾನು ಮತ್ತು ಚಾಸಾ.10 ರವರು ಆರೋಪಿಯನ್ನು ಗದರಿಸಿ ಆತನನ್ನು ಹಿಡಿದುಕೊಂಡೆವು, ಆಗ ಆರೋಪಿ ತನ್ನ ಕೈಯಲ್ಲಿದ್ದ ಕಲ್ಲನ್ನು ಕೆಳಗೆ ಬೀಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

25. ಮು.ಮಾ.6 ಎಂದು ಗುರುತಿಸಲ್ಪಟ್ಟಿರುವಂತಹ ಕಲ್ಲು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಮತ್ತು ಅದನ್ನು ಗುರುತಿಸಲು ಅದರ ಮೇಲೆ ಯಾವುದೇ ವಿಶೇಷವಾದ ಗುರುತು ಇಲ್ಲ ಎಂದರೆ ಸಾಕ್ಷಿ ಅದೇ ಕಲ್ಲನ್ನು ಆರೋಪಿ ಕನಕರವರ ತಲೆಯ ಮೇಲೆ ಎತ್ತಿ ಹಾಕಿದ್ದನ್ನು ನಾನು ನೋಡಿದ್ದೇನೆ ಎನ್ನುತ್ತಾರೆ. ಘಟನಾ ಸಮಯದಲ್ಲಿ ನೀವು 100 ಅಡಿ ದೂರ ಇದ್ದ ಕಾರಣ ಸ್ಥಳದಲ್ಲಿ ಏನು ನಡೆಯಿತು ಮತ್ತು ಏನು ಮಾತುಕತೆಯಾಯಿತು ಎಂದು ನೀವು ನೋಡಿಲ್ಲ ಮತ್ತು ಕೇಳಿಲ್ಲ ಎಂದರೆ ಸರಿಯಲ್ಲ. ಕನಕರವರ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನೋಡಿದ್ದನ್ನೇ ನೀವು ಸುಳ್ಳು ಎಂದರೆ ನಾನು ಏನು ಹೇಳಲಿ ಎನ್ನುತ್ತಾರೆ. ನೀವು ತಡರಾತ್ರಿ ಮತ್ತು ಬೆಳಗಿನ ಜಾವದಲ್ಲಿ ಕೆಲಸ ಮಾಡುವುದರಿಂದ ನಿಮಗೆ ಪೊಲೀಸರ ಪರಿಚಯ ಇದೆ ಎಂದರೆ ಸರಿ. ನೀವು ಪೊಲೀಸರೊಂದಿಗೆ ತುಂಬಾ ಆತ್ಮೀಯತೆಯನ್ನು ಹೊಂದಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಘಟನೆಯನ್ನು ನೋಡದಿದ್ದರೂ ಸಹ ಪೊಲೀಸರಿಗೆ

ಆತ್ಮೀಯರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ